Rega No M 1229 | 43rd Year | Sri 'Satyavadi' Mysore | 4—3-[illegible]79

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುನೆ ಸಿಂಹೇದಾರ್ ಎ. ಎ ಸುಬ್ಬರಾಯುರು [ಬಿಡಿ ಪ್ರತಿಗೆ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸಿಂಹಳದಲ್ಲಿ ಹತ್ತು ಲಕ್ಷ ಜನ ಕಾರ್ಮಿಕರ ಮುಷ್ಕರ

ಕೊಲಂಬೊ 3 — ಸಿಂಹಳ ಟ್ರಾಟ್ಸ್ಕಿಟ್ ಸಮ ಸಮಾಜ ಪಕ್ಷದ ಕರೆಯಂತೆ ಈ ದಿನ ನಡೆದ ಸಾಂಕೇತಿಕ ಮುಷ್ಕರದಲ್ಲಿ ಸಿಂಹಳದಾದ್ಯಂತ 10 ಲಕ್ಷ ಕಾರ್ಮಿಕರು ಭಾಗವಹಿಸಿದ್ದರೆಂದು ಪಕ್ಷದ ಕಾರ್ಯದರ್ಶಿ ಬಾಲ ತಿಳಿಸಿದರು ಮುಷ್ಕರ ಮತ್ತು ಅಶಾಂತಿ ಕಾಲದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲು ಕಾರ್ಯಾಂಗ ಹೆಚ್ಚು ಅಧಿಕಾರ ಪಡೆಯಲು ಬಯಸುವ ಸಾರ್ವಜನಿಕ ರಕ್ಷಣಾ ಶಾಸನವನ್ನು ತಿದ್ದುಪಡಿಗಳನ್ನು ಪ್ರತಿಭಟಿಸಿ ಈ ಕ್ರಮ.

ಮಹಿಳಾ ಕಾರ್ಯದರ್ಶಿ

ನವದೆಹಲಿ 3 — ಶ್ರೀಮತಿ ಸುಜೇತಾ ಕೃಪಲಾನಿಯವರು ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರಾಗಿ ಪೈಕಿ ಏರ್ಪಾಡಾಗಿ ನೇಮಕವಾಗಿದ್ದಾರೆ.

ಸಭಾತ್ಯಾಗ

ಪಾಟ್ನಾ 3 — 13-15 ಗಂಟೆಯಲ್ಲಿ ಬಿಹಾರ ವಿಧಾನ ಸಭೆ ಪ್ರಾರಂಭವಾದಾಗ ಮುಂತ್ರಿಗಳಿಲ್ಲದಿರುವುದನ್ನು ಪ್ರತಿಭಟಿಸಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು.

ಕಾಂಗ್ರೆಸಿಗೆ ಸೇರಿದರು

ಹೈದರಾಬಾದು 3 — 4 ವಿರೋಧ ಪಕ್ಷದ ಸದಸ್ಯರು ಶಾಸನ ಸಭೆ ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದರು.

ಪುಸ್ತಕ ಮಾಸ

ಭಾರತದ ಜಾತಿ, ಕಲೆ ಮತ್ತು ಶಿಲ್ಪದ ಬಗ್ಗೆ ಸುಮಾರು ಪುಸ್ತಕಗಳನ್ನು ಈಚೆ ರಾಷ್ಟ್ರಪತಿ ಪುಸ್ತಕ ಭಂಡಾರ ಪ್ರಕಾಶನಕ್ಕೆ ಭಾರತ ರಾಯಭಾರಿ ಶ್ರೀ ಆರ್. ನಹರು ಕೊಟ್ಟರು

ಪೋಲೀಸು ಕಾರ್ಯಪಬಲ್‌ಗೆ ಶಿಕ್ಷೆ

ಮಂಗಳೂರು ವಿಶ್ವನಾಥನೆಂಬ ಪೋಲೀಸು ಪ್ಯಾದೆಗೆ ಮಂಗಳೂರಿನ ಪ್ರಿ|| ಸಿ| ನ್ಯಾಯಾಧೀಶರಾದ ಶ್ರೀ ಸಿ. ಎಸ್. ಒಡೆಯರು ಅತ್ಯಾಚಾರ ಮೊಕದ್ದಮೆ ಸಂಬಂಧದಲ್ಲಿ 2 ವರ್ಷಗಳ ಕಠಿಣ ಸಜೆ ಮತ್ತು ರೂ 200 ದಂಡ, ದಂಡ ಕೊಡದಿದ್ದರೆ ಮತ್ತೆ 3 ತಿಂಗಳು ಕಠಿಣ ಸಜೆ ವಿಧಿಸಿದರು ಮತ್ತೊಂದು ಆರೋಪದ ಮೇಲೆ ಅವನಿಗೆ 3 ತಿಂಗಳು ಕಠಿಣ ಸಜೆ ರೂ. 100 ದಂಡ ವಿಧಿಸಿದರು ದಂಡ ಕೊಡದಿದ್ದರೆ ಮತ್ತೊಂದು ತಿಂಗಳು ಕಠಿಣ ಸಜೆ ವಿಧಿಸಿದರು ನವೆಂಬರು 7 ನೇ ತಾ|| ಮೂಡಬಿದ್ರೆ ಬಸ್ ನಿಲ್ದಾಣದಲ್ಲಿ ಮಲಗಿದ್ದ ತೋಟದ ಪೂಜಾರಿ ಮೈಂದ ಎಂಬವನನ್ನು ಬಂಧಿಸಿ ಅವನ ಪತ್ನಿ ಚಿನ್ನಮ್ಮನೆಂಬವಳ ಮೇಲೆ ಬಲಾತ್ಕಾರದಿಂದ ಅತ್ಯಾಚಾರ ನಡೆಸಿದನೆಂದು ಪ್ರಾಸಿಕ್ಯೂಷನವರು ಮೊಕದ್ದಮೆ ಹೂಡಿದ್ದರು

8 ಜನರ ಮರಣ

ಹಿಸ್ಸಾರ್ 2 — ಪಂಜಾಬು ಸರಕಾರದ ಬಸ್ ಮತ್ತು ಮೋಟಾರು ಟ್ರಕ್‌ವೊಂದಕ್ಕೆ ಘರ್ಷಣೆಯಾಗಿ 8 ಜನರು ಮರಣ ಹೊಂದಿದರು

ಸರ್ಕಾರಕ್ಕೆ ಉತ್ಪನ್ನ

ಎಟ್ಟಾಯಪುರಂ 2 — ಕಳೆದ ತಿಂಗಳು 28 ಕ್ಕೆ ಆದ ಮುತ್ತು ಸಂಗ್ರಹದಲ್ಲಿ ಮದ್ರಾಸು ಸರ್ಕಾರಕ್ಕೆ ರೂ 1 ಲಕ್ಷ 55 ಸಾವಿರ ಉತ್ಪನ್ನವಾಗಿದೆ.

ಪೌರಸಭೆ

ಮೈಸೂರು 3— ಪೌರಸಭೆಯ ಮುಂದುವರಿದ ವಿಚಾರಣೆಯು ತಾ|| 6 ಶುಕ್ರವಾರ ಸಂಜೆ 4-30 ಕ್ಕೆ ನಡೆಯುವುದು.

ರೈಲು ಹಾಕಿರೆಂದು ಒತ್ತಾಯ

ನವದೆಹಲಿ 3 — ಹಾಸನ-ಮಂಗಳೂರು ರೈಲು ನಿರ್ಮಾಣ ಆಗಬೇಕೆಂದು ಮೈಸೂರಿನ ಶ್ರೀ ಸಿ ಆರ್ ಬಸಪ್ಪನವರು ಲೋಕಸಭೆಯಲ್ಲಿ ಒತ್ತಾಯ ಮಾಡಿದರು.

ಜಾತಿ ಹೇಳಲಿಚ್ಚೆಯಿಲ್ಲ

ಬೆಂಗಳೂರು 3 — ಮೈಸೂರು ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಪಿ ವಿ ಆರ್. ರಾವ್‌ರವರು ತಾವು ಬ್ರಾಹ್ಮಣರೆಂದು ಹೇಳಿಕೊಳ್ಳಲಿಚ್ಚಿಸದೆ ಹಿಂದೂ ಎಂಬುದಾಗಿ ಹೇಳಿಕೊಳ್ಳಲು ಇಚ್ಚಿಸಿರುವುದಾಗಿ ವಿಧಾನ ಪರಿಷತ್ತಿನಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ತಿಳಿಸಿದರು

ಕೂಲಿ ನಿಗದಿ

ಮದ್ರಾಸು 3 — ಮದ್ರಾಸು ಪ್ರಾಂತದಲ್ಲಿ ವ್ಯವಸಾಯ ಕಾರ್ಮಿಕರಿಗೆ ಮುಂದಿನ ವರ್ಷದೊಳಗೆ ಕನಿಷ್ಠ ಕೂಲಿ ನಿಗದಿ ಮಾಡುವುದಾಗಿ ವಿಧಾನ ಸಭೆಯಲ್ಲಿ ಕಾರ್ಮಿಕ ಮಂತ್ರಿ ಶ್ರೀ ಆರ್. ವೆಂಕಟರಾಮ್ಮ ತಿಳಿಸಿದ್ದಾರೆ.

ವಿವಿಧ ವರ್ತಮಾನ

ದೆಹಲಿ 2 — 57-58 ರಲ್ಲಿ ಪ್ರತಿಯೊಂದು ರಾಜ್ಯ-ಸರ್ಕಾರಕ್ಕೂ, ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ವೇತನಗಳನ್ನು ಹೆಚ್ಚಿಸುವ ಸಲುವಾಗಿ 57-58 ರಲ್ಲಿ ಕೇಂದ್ರ ಸರ್ಕಾರದ ಗ್ರಾಂಟು ಬಗೆಗೆ ಅಂಕಿಅಂಶಗಳ ಪಟ್ಟಿಯು ಲೋಕಸಭೆಯ ಮುಂದೆ ಇಡಲ್ಪಟ್ಟಿತು. 57-58 ರಲ್ಲಿ ಮೈಸೂರು ರಾಜ್ಯಕ್ಕೆ ಕೇಂದ್ರದಿಂದ 350000 ರೂಗಳ ಗ್ರಾಂಟನ್ನು ಮಂಜೂರ್ಮಾಡಲಾಗಿದೆ.

ನವದೆಹಲಿ 3— 57-58 ರ ಹಣಕಾಸಿನ ವರ್ಷದ ಕೊನೆಯಲ್ಲಿ ಪ್ರತಿಯೊಂದು ರಾಜ್ಯದಿಂದಲೂ ಬರಬೇಕಾದ ಹಣವನ್ನು ಸೂಚಿಸುವ ಪಟ್ಟಿಯು ಲೋಕಸಭೆಯ ಮುಂದಿಡಲಾಯಿತು — ಆ ಪಟ್ಟಿಯ ಪ್ರಕಾರ 1958 ರ ಏಪ್ರಿಲ್ 1 ರಂದು ಮೈಸೂರು ರಾಜ್ಯವು ಕೇಂದ್ರಕ್ಕೆ 104-71 ಕೋಟಿ ರೂಗಳನ್ನು ಕೊಡಬೇಕಾಗಿತ್ತು.

ನವದೆಹಲಿ 3— 58 ರ ಮೊದಲನೆಯ 11 ತಿಂಗಳಲ್ಲಿ ಭಾರತವು ಮಾವಿನಹಣ್ಣಿನ ನಿರ್ಯಾತದಿಂದ ಒಟ್ಟು 19-97 ಲಕ್ಷಗಳನ್ನು ಗಳಿಸಿದೆ.

ಮೈ. ಉಳುವರಿ ಮುಂಗಡಪತ್ರ

ಬೆಂಗಳೂರು 3 — ಮೈಸೂರು ಪ್ರಾಂತದ ಹಣಕಾಸಿನ ಮಂತ್ರಿ ಶ್ರೀ ಟಿ ಪುರಿಯಪ್ಪನವರು ಈ ದಿನ ಶಾಸನ ಸಭೆಯಲ್ಲಿ ರೂ 48-40 ಲಕ್ಷದ ಉಳುವರಿ ಅಂದಾಜಪಟ್ಟಿ ಮಂಡಿಸಿದರು

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸಂಪತ್ಕೃಷ್ಣ ಜೋಯಿಸರಿಂದ
5 ವಿಕಾರಿ ಉತ್ತರಾಷಾಢ

× ಅಮೇರಿಕಾ ಚಂದ್ರಗ್ರಹ ರಾಕೆಟ್ ನಿನ್ನೆ ಹಾರಿಸಿತು

o o

× ಕೆಲವು ಪದಾರ್ಥಗಳ ಬೆಲೆ ಏರಿಕೆ ಅಪೇಕ್ಷಣೀಯವಲ್ಲವೆಂದು ಭಾರತ ಆರ್ಥಿಕ ಶಾಖೆ ಪ್ರಮುಖರೋರ್ವರು ನಿನ್ನೆ ದೆಹಲಿಯಲ್ಲಿ ತಿಳಿಸಿದರು

o o

× ಪಾಕಿಸ್ತಾನ ಮತ್ತು ಪಾಕಿಸ್ತಾನದ ಗೋಳಬಾರು ನುಂದುವರಿಯುತ್ತಿದೆ

ಸರ್ವೋದಯತತ್ವ

(ಮುಂದುವರಿದುದು)

ರಾಜಾ ರಾಷ್ಟ್ರಕೃತಂ ಪಾಪಂ ರಾಜಘಾತಪ ಪುರೋಹಿತಃ ಎಂಬುದು ಒಂದು ನಾಣ್ನುಡಿ. ಇದರ ಅರ್ಥವು:— ದೇಶದ ಜನಗಳು ಮಾಡಿದ ಕಷ್ಟಕ್ಕೆ ಆ ದೇಶದ ರಾಜನು ಉತ್ತರವಾದಿಯಾಗುತ್ತಾನೆ, ಆ ರಾಜನ ಕಷ್ಟಕ್ಕೆ ಅವನಿಗೆ ಸಲಹೆ ಕೊಡುವ ಪುರೋಹಿತನು ಉತ್ತರವಾದಿಯಾಗುತ್ತಾನೆ. ಇದರ ಅರ್ಥವೇನು ? ಅವರವರ ಮನೆಯ ಸಂಸಾರವನ್ನೇ ಚೊಕ್ಕಟವಾಗಿ ನಡೆಸಲು ಕಷ್ಟವಾಗಿರುವಾಗ, ಅನೇಕ ಸಂಸಾರಗಳ, ಅನೇಕ ಗ್ರಾಮಗಳ, ಅನೇಕ ತಾಲ್ಲೂಕುಗಳ ಮತ್ತು ದೇಶದ ಜನಗಳ ಕಷ್ಟಸುಖಗಳ ಹೊಣೆಯನ್ನು ವಹಿಸಲು ಮುಂದಾಗುವ ವ್ಯಕ್ತಿಯು ಎಷ್ಟು ಭಯದಿಂದ, ಎಷ್ಟು ವಿವೇಕದಿಂದ, ಎಷ್ಟು ನಿಷ್ಪಕ್ಷಪಾತ ಬುದ್ಧಿಯಿಂದ ವ್ಯವಹರಿಸಬೇಕಾಗುತ್ತದೆ ಎಂಬುದನ್ನು ರಾಜಕೀಯ ಸೇವೆಗಾಗಿ ಅಣಿಯಾಗಿರುವ ವ್ಯಕ್ತಿಗಳು ಗಮನಿಸತಕ್ಕದ್ದು. ನಮ್ಮ ದೇಶವು ನಾಗರೀಕತೆಯ ಅತ್ಯುನ್ನತ ಶಿಖರವನ್ನೇರಿದ ಕಾಲವೊಂದಿತ್ತು ; ಆಗ ನಮ್ಮ ದೇಶವು ಅತ್ಯಂತ ಸುಭಿಕ್ಷವಾಗಿತ್ತು : ದೇಶದಲ್ಲಿ ಅತ್ಯಂತ ಧನಿಕನು, ಅತ್ಯಂತ ದರಿದ್ರನು ಇರಲೇ ಇಲ್ಲವೆಂದೂ, ದೇಶವು ಧನಧಾನ್ಯ ಸಮೃದ್ಧವಾಗಿ, ಜನಗಳು ಶಾಂತಚಿತ್ತರಾಗಿ ಜೀವನಮಾಡುತ್ತಿದ್ದರೆಂದೂ ಮೆಗಾಸ್ತನೀಸ್ ಮುಂತಾದ ವಿದೇಶೀ ಪ್ರಯಾಣೀಕರು ಬರೆಯುತ್ತಾರೆ. ರಾಜನಿಲ್ಲದ ರಾಜ್ಯಾಂಗನಿಯಮದಲ್ಲಿ ರಾಜಶಕ್ತಿಯು ಇದ್ದೇ ಇದೆ ; ಅದು ಮಡುಗಟ್ಟಿಕೊಂಡಿರುವ ಬಂಕಿಹುಂಡೆಯಂತೆ ಸ್ವಾರ್ಥಿಗಳನ್ನು, ಅಧರ್ಮಕೃತ್ಯಕರ್ತರನ್ನು ಖಂಡಿತವಾಗಿಯೂ ಸುಡುವುದೆಂಬುದನ್ನು ಲಕ್ಷದಲ್ಲಿಡಬೇಕು.

———

ನವದೆಹಲಿ 2— ಬಿಹಾರ ವಿಶ್ವವಿದ್ಯಾನಿಲಯದ ಡಾ| ಹರಿರಂಜನ ಘೋಷ್ ಸಾಲ್. ಡಿ ಲಿಟ್‌ರವರ ' ಭಾರತದ ಇತಿಹಾಸ ' ಎಂಬ ಹಸ್ತಪ್ರತಿಗೆ ಭಾರತ ಸರಕಾರದ ಶಿಕ್ಷಣ ಮಂತ್ರಿ ಶಾಖೆಯವರು, ಅದು ಅತ್ಯುತ್ತಮ ಹಸ್ತಪ್ರತಿಯೆಂದು ಪರಿಗಣಿಸಿ 5 ಸಾವಿರ ರೂಗಳ ಬಹುಮಾನವನ್ನಿತ್ತಿರುವರು.

o o o o

ಮಾಸ್ಕೋ — ಲೆನಿನ್‌ಗ್ರಾಡಿನ ನೌಕಾಂಗಣದಲ್ಲಿ 100 ಟನ್ನುಗಳ ಪಾಣ್ಣಿಸ್ಟಿಕ್ ತೈಲನೌಕೆಯೊಂದನ್ನು ನಿರ್ಮಿಸಲಾಗುವುದು ; ಅದರ ಉದ್ದ 32-5 ಮೀಟರು, ವಿಸ್ತಾರ 3-30 ಮೀಟರು ಇರುವುದು.

o o o o

ದೇಹದ ಕೆಳಭಾಗದಲ್ಲಿ ಶುದ್ಧಾಂಕ್ಯನಾಳಗಳಲ್ಲಿನ ಪ್ರತಿಬಂಧಕಗಳನ್ನು ಶಸ್ತ್ರಚಿಕಿತ್ಸೆಯು ಮೂಲಕ ನಿವಾರಿಸಿ ರಕ್ತಪ್ರವಾಹವನ್ನು ಪುನಃ ಉತ್ತೇಜಿಸುವ ಕಾರ್ಯದಲ್ಲಿ ಶೇಡಡ 90 ಕ್ಕಿಂತಲೂ ಹೆಚ್ಚು ಯಶಸ್ಸು ಲಭಿಸಿದೆಯೆಂದು ಸರ್ಜನ್-ಹೂಥ್ನಿನ ಸರ್ಜನೊಬ್ಬರು ಪ್ರಕಟಿಸಿದ್ದಾರೆ

ಪಕ್ಕದ ಚಿತ್ರ

1912 ರಲ್ಲಿ ಅಟೆಂಯುಗ ಪ್ರಾರಂಭವಾಯಿತು , ಯುದ್ಧ ಶಸ್ತ್ರಾಸ್ತ್ರಗಳಿಗೆ ನ್ಯೂಕ್ಲಿಯರ್ ಕಾರ್ಯವನ್ನು ಉಪಯೋಗಿಸುವುದರ ಜೊತೆಗೆ ಅನೇಕ ಅಣುಶಕ್ತಿಯ ಪಬ್‌ಮೇರಿನ ಗಳನ್ನು ಕಾರ್ಯಾಚರಿಸುವುದಲ್ಲದೆ ಈ ಶಕ್ತಿಗಳನ್ನು ಪ್ರಯಾಣೇತರ ಹಡಗುಗಳಿಗೂ ಉಪಯೋಗಿಸಲಾಗಿದೆ.

ಶಾಂತಿಗಾಗಿ ಅಣುಶಕ್ತಿ ಕಾರ್ಯಕ್ರಮದಲ್ಲಿ ಔಷಧಿ, ಕೈಗಾರಿಕೆ, ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಉಪಯೋಗಿಸಲಾಗುತ್ತಿದೆ

ಡಾ|| ಫೆರ್ಮಿಯು ಮೃತ್ಯುವಿನ ಪಾಲಾದರೂ, ಅವರು ಕಂಡುಹಿಡಿದ ನ್ಯೂಕ್ಲಿಯರು ಶಕ್ತಿಯನ್ನು ಅವರು ದತ್ತುಮಾಡಿಕೊಂಡ ಅಮೇರಿಕಾಕ್ಕೆ ಕೊಟ್ಟರು.

Edited, Printed & Published by Dharma Prachara Nirata M S Krishna Rao at the Satyavadi Press Chamarajapuram, Mysore

ವುಡ್‌ಲ್ಯಾಂಡ್ ವೈಭವ 5 ನೇ ವಾರ

ಎಷ್ಟು ಸಾರಿ ನೋಡಿದರೂ ಮತ್ತೆಮತ್ತೆ ನೋಡಬೇಕೆನ್ನಿಸುವ ಚಿತ್ರರತ್ನ

ದಿಲ್ಲೀ — ಕ — ಥಗ್ (ಹಿಂದಿ)

ತಾರಾಗಣ:- ನೂತನ್, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಸಂಗೀತಪೂರ್ಣ ಹಾಸ್ಯಮಯ ಚಿತ್ರ — ನೀರಿನ ನೃತ್ಯಗಳು ಗೇವಾಕಲರಿನಲ್ಲಿ

ಅಪೆರಾ— 1-3-59 ರಿಂದ

ಮಾಧವಿ

ನಟವರ್ಗ— ಎಸ್. ಜಾನಕಿ, ದೇವಿಕ, ಮನೋಹರ

ಮನಮೋಹಕ ಕಮಿಳು ಚಿತ್ರ — — ಪ್ರತಿದಿನ 3 ಆಟಗಳು







ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾ ರ್ಮ ಸಿ
ಅಶ್ವಾನ್ಸ್‌ಡಾ ಬಜಾರ್ ಮೈಸೂರು

For Quality Printing

L. N. Pres
Sivasampet, Mysore